# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

**ಶಾಸನಬದ್ಧ ಸಹಕಾರಿ ಸಂಸ್ಥೆ**

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010

**www.souharda.coop, Ph: 080-23378375-80, E-mail: souharda@souharda.coop**

ಸಂಖ್ಯೆ : ಸಂಸ/ಶಿವಿ/ತರಬೇತಿ-4/01/2019-20 ದಿನಾಂಕ: 20.05.2019

**ಸುತ್ತೋಲೆ**

**ಇವರಿಗೆ:**

ಮಾನ್ಯ ಅಧ್ಯಕ್ಷರು./ಮುಖ್ಯಕಾರ್ಯನಿರ್ವಾಹಕರು

ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳು

**ಮಾನ್ಯರೇ,**

**ವಿಷಯ:** ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ **"ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್" (Basic Banking Certificate Course) ದಿನಾಂಕ 01 ರಿಂದ 7 ಜುಲೈ 2019** ರವರೆಗೆ ತರಬೇತಿಯಲ್ಲಿ ಭಾಗವಹಿಸಲು ಸಿಬ್ಬಂದಿಯವರನ್ನು ಕಳುಹಿಸುವ ಕುರಿತು.

ಈ ಮೇಲ್ಕಂಡ ವಿಷಯಕ್ಕೆ ತಮ್ಮ ಗಮನ ಹರಿಸಲು ಕೋರಿದೆ. ಸಂಯುಕ್ತ ಸಹಕಾರಿಯ ವಾರ್ಷಿಕ ಕಾರ್ಯಕ್ರಮಗಳಡಿಯಲ್ಲಿ ಪಟ್ಟಣ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ದಿನಾಂಕ 01 ರಿಂದ 7 ಜುಲೈ 2019ರವರೆಗೆ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್ ಹಮ್ಮಿಕೊಳ್ಳಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ 50 ಜನರಿಗೆ ಭಾಗವಹಿಸಲು ಅವಕಾಶವಿದೆ. ತರಬೇತಿ ಕಾರ್ಯಕ್ರಮ "ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ" ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು ಇಲ್ಲಿ ವ್ಯವಸ್ಥೆ ಮಾಡಲಾಗಿದೆ. ಊಟ, ಉಪಹಾರ, ವಸತಿ ವೆಚ್ಚಗಳ ನಿರ್ವಹಣೆಗಾಗಿ ತಲಾ ರೂ.3,500/- ವೆಚ್ಚವನ್ನು ಪಾವತಿಸಬೇಕಾಗುತ್ತದೆ.

ಕೋರ್ಸ್‌ನ ಅಧ್ಯಯನ ವಿಷಯಗಳನ್ನು ತಮ್ಮ ಮಾಹಿತಿಗಾಗಿ ಲಗತ್ತಿಸಲಾಗಿದೆ. ಈ ವಿಷಯಗಳ ಜೊತೆಗೆ ಅಳವಡಿಸಬಹುದಾದ ಇತರೆ ವಿಷಯಗಳ ಬಗ್ಗೆ ತಿಳಿಸಲು ಕೋರಿದೆ. ವಾಣಿಜ್ಯ ಬ್ಯಾಂಕುಗಳ/ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರು/ಅಧಿಕಾರಿಗಳು ಹಾಗೂ ಸಹಕಾರಿ ಕ್ಷೇತ್ರದ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸದ ವ್ಯವಸ್ಥೆ ಮಾಡಲಾಗುತ್ತದೆ.

ತಮ್ಮ ಸೌಹಾರ್ದ ಸಹಕಾರ ಬ್ಯಾಂಕಿನಿಂದ ತಾವು ಕಳುಹಿಸಬಹುದಾದ ಸಿಬ್ಬಂದಿಯವರಿಗೆ ಕೋರ್ಸ್‌ನ ನಿರ್ವಹಣಾ ವೆಚ್ಚದ ಜೊತೆಗೆ ಬೆಂಗಳೂರಿಗೆ ಬಂದು ಹೋಗುವ ವೆಚ್ಚವನ್ನು ಭರಿಸಬೇಕಾಗುತ್ತದೆ. ಭಾಗವಹಿಸುವ ಸಿಬ್ಬಂದಿಯ ಸಂಖ್ಯೆ, ಹೆಸರು, ವಿವರಗಳನ್ನು ಲಗತ್ತಿಸಿದ ಮಾದರಿಯಲ್ಲಿ ಕಳುಹಿಸಲು ಕೋರಿದೆ.

ಮು.ತಿ.ನೋ

**ಕೋರ್ಸ್ ವಿವರಗಳು**

| | | |
|---|---|---|
| 1. | **ಭಾಗವಹಿಸುವ ವರ್ಗ** | : ವ್ಯವಸ್ಥಾಪಕರು, ಕಿರಿಯ ಅಧಿಕಾರಿಗಳು/ಲೆಕ್ಕಿಗರು, ಕಾರ್ಯನಿರ್ವಾಹಕರು ಹಾಗೂ ಹೊಸದಾಗಿ ನೇಮಕಗೊಂಡಿರುವ ಸಿಬ್ಬಂದಿಗಳು |
| 2. | **ಕೋರ್ಸ್ ಅವಧಿ** | : 7 ದಿನಗಳು |
| 3. | **ಕೋರ್ಸ್ ಸ್ಥಳ** | : ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭ ನಗರ, ದೇವೆಗೌಡ ಪೆಟ್ರೋಲ್ ಬಂಕ್ ಹತ್ತಿರ, ಬೆಂಗಳೂರು |
| 4. | **ಸೌಲಭ್ಯಗಳು** | : ಊಟ–ಉಪಹಾರ, ವಸತಿ, ಅಧ್ಯಯನ ಸಾಹಿತ್ಯ, |
| 5. | **ಸೌಲಭ್ಯಗಳ ನಿರ್ವಹಣಾವೆಚ್ಚ ತಲಾ** | : 3500/– ಒಬ್ಬರಿಗೆ |
| 6. | **ಅಭ್ಯರ್ಥಿಗಳ ಸಂಖ್ಯೆ.** | : 50 |
| 7. | **ಕೋರ್ಸ್ ದಿನಾಂಕ** | : ದಿನಾಂಕ 01.07.2019 ರಿಂದ – ದಿನಾಂಕ 07.07.2019 ರವರೆಗೆ |
| 8. | **ನೋಂದಾವಣೆಗೆ ಕೊನೆಯ ದಿನಾಂಕ** | : 20.06.2019 |

ಸದರಿ ಸೌಲಭ್ಯಗಳ ನಿರ್ವಹಣಾ ವೆಚ್ಚ ತಲಾ ರೂ.3500/–ಗಳನ್ನು 'ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು' (Karnataka State Souharda Federal Cooperative Ltd., Bangalore) ಹೆಸರಿಗೆ, ಡಿಡಿ/ಚೆಕ್ ತೆಗೆದು ಕಳುಹಿಸಬೇಕು. ಹೆಚ್ಚಿನ ವಿವರಗಳಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಕೋರಿದೆ.

ವಂದನೆಗಳೊಂದಿಗೆ,

Karnataka State Souharda Federal Cooperative Ltd. Regn. No. RSR / SOU / ACT / 136 / Regn. 051 / 2001-02 dated : 04-01-2002 * Bangalore *

ತಮ್ಮ ವಿಶ್ವಾಸಿ,

(ಶರಣಗೌಡ ಜಿ. ಪಾಟೀಲ್)
ವ್ಯವಸ್ಥಾಪಕ ನಿರ್ದೇಶಕರು

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

ನಿರ್ಮಾಣ ಭವನ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010

www.souharda.coop, Ph: 080-23378375-80, E-mail: souharda@souharda.coop


## ನೋಂದಣಿ ಪತ್ರ

ಭಾವಚಿತ್ರ

**ಸಹಕಾರಿ ಬ್ಯಾಂಕಿನ ಹೆಸರು :**

**ವಿಳಾಸ :**

**ದೂರವಾಣಿ ಸಂಖ್ಯೆ :**

**ಸಂಯುಕ್ತ ಸಹಕಾರಿಯ ಸದಸ್ಯತ್ವ ಸಂಖ್ಯೆ :**

| **ಭಾಗವಹಿಸುವ ಪ್ರತಿನಿಧಿಯ ವಿವರ** | |
|---|---|
| ➤ **ಹೆಸರು :** | ➤ **ಹುದ್ದೆ :** |
| ➤ **ವಿಳಾಸ :** | ➤ **ವಿದ್ಯಾರ್ಹತೆ :** |
| ➤ **ದೂರವಾಣಿ ಸಂಖ್ಯೆ :** | ➤ **ಅನುಭವ :** |
| ➤ **ಇ ಮೇಲ್ :** | |

**ಶುಲ್ಕ ಪಾವತಿ ಮಾಹಿತಿ :**

ನೋಂದಾವಣಿ ಶುಲ್ಕ :

ಚೆಕ್/ಡಿಡಿ ನಂ. & ದಿನಾಂಕ :

ಬ್ಯಾಂಕ್ ಹೆಸರು :

ಸಂಯುಕ್ತ ಸಹಕಾರಿಯು ಆಯೋಜಿಸಿರುವ 07 ದಿನಗಳ ಬೇಸಿಕ್ ಬ್ಯಾಂಕಿಂಗ್ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಭಾಗವಹಿಸಲು ಇಚ್ಛಿಸಿರುತ್ತೇನೆ ಹಾಗೂ ಕೋರ್ಸ್ ನಿಯಮಗಳಿಗೆ ಬದ್ಧನಾಗಿರುತ್ತೇನೆ.

**ಭಾಗವಹಿಸುವ ಪ್ರತಿನಿಧಿಯ ಸಹಿ**

ಮೇಲ್ಕಂಡಂತೆ ವಿವರವನ್ನು ಹೊಂದಿರುವ ನಮ್ಮ ಸಹಕಾರಿಯ ಪ್ರತಿನಿಧಿಗೆ ಕೋರ್ಸ್‌ನಲ್ಲಿ ಭಾಗವಹಿಸಲು ಅವಕಾಶ ನೀಡಲು ಕೋರಿದೆ.

**ಅಧ್ಯಕ್ಷರು/ಮುಖ್ಯಕಾರ್ಯನಿರ್ವಾಹಕರು**

**ಸಹಕಾರಿಯ ಮೊಹರು** **—————————— ಸಹಕಾರಿ ಬ್ಯಾಂಕ್ ನಿ.,**